ಪ್ರಧಾನ ಸಿವಿಲ್ ನ್ಯಾಯಧೀಶರು ಮತ್ತು ಪ್ರ .ದ ನ್ಯಾ ದಂ ಗಳ ನ್ಯಾಯಾಲಯ ಹೊಸಪೇಟೆ
**ಸಿಸಿ 831-2014**

ಸಿ ಡಬ್ಲೂ -2
ಪಿ ಡಬ್ಲೂ -2

ಸಾಕ್ಷಿ ಹೆಸರು - ಗಂಗಾಧರ್
ತಂದೆ / ಗಂಡನ ಹೆಸರು - ಮಲ್ಲಾರೆಡ್ಡಿ
ವಯಸ್ಸು - 45 ವರ್ಷಗಳು
ಉದ್ಯೋಗ - ಖಾಸಗಿ ಕೆಲಸ
ವಾಸಸ್ಥಳ - ಹೊಸಪೇಟೆ

ಸಾಕ್ಷಿಯನ್ನು ದಿನಾಂಕ 05-04-2021 ರಂದು ಪ್ರಾಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆ- ಎ. ಪಿ. ಪಿ. ಅವರಿಂದ

ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಿ ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು ಆ ದಾಖಲೆಯನ್ನು ನಿಪಿ-3, ಎಂದು ಸಾಕ್ಷಿಯ ಸಹಿಯನ್ನು ನಿಪಿ 3 -ಎ ಎಂದು ಗುರುತಿಸಲಾಯಿತು . ಸದರಿ ಸಹಿಯನ್ನು ನಾನು ಸುಮಾರು 8-10 ವರ್ಷದ ಹಿಂದೆ ಕಂಪನಿಯಲ್ಲಿ ಕೆಲಸ ಮಾಡುವಾಗ ಸಹಿ ಮಾಡಿದ್ದೇನೆ .ನಿಪಿ 3 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ . ಈ ಪ್ರಕರಣದ ಬಗ್ಗೆ ನಾನು ಹೇಳಿಕ ಕೊಟ್ಟಿಲ್ಲ

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದ

ದಿನಾಂಕ 30-03-2013 ರಂದು ಪೊಲೀಸ್ ರು ನನ್ನ ಹಾಗಾ ಚಾಸಾ 3 ರವರನ್ನು ಪಂಚರಾಗಿ ಬರಮಾಡಿಕೊಂಡುಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ರೈಲ್ವೆ ಸ್ಟೇಷನ್ ರಸ್ತೆಯಲ್ಲಿರುವ ಎಸ್ ಬಿ ಐ ಬ್ಯಾಂಕಿನ ಮುಂದುಗಡೆ ಮದ್ಯಾಹ್ನ 1-00 ರಿಂದ 2-00 ರವರಗೆ ಚಾಸಾ 1 ರವರ ಸಮಕ್ಷಮ ಪಂಚಾನಮೆ ಮಾಡಿದ್ದಾರೆ ಅಂದರೆ ಸರಿಯಲ್ಲ . ದಿಃ 30-08-2013 ರಂದು ನಾನು ಪೊಲೀಸ್

ರಿಗೆ ಪೆಬ್ರವರಿ ತಿಂಗಳು 2013 ರಲ್ಲಿ ಚಾಸಾ 1 ರ ವರು ಎಸ್ ಬಿ ಐ ಬ್ಯಾಂಕ್ ಹತ್ತಿರ ಬೇಟಿ ಅಗಿ ಅಲ್ಲಿಗೆ ಆರೋಪಿ ಬಂದು ಕಬ್ಬಿಣದ ಅದಿರನ್ನು ಪೂರೈಸಲು ಐಡಿ ಬಿ ಐ ಬ್ಯಾಂಕಿನ ಚೆಕ್ಕು ನಂಬರ್ 157198 ದಿಃ 22-02-2013 ರ ರೂ. 51,00,000 ಮೌಲ್ಯದ ಚೆಕ್ಕನ್ನು ಎಸ್ ಆರ್ ಟ್ರೇಡಿಂಗ್ ಕಾರ್ಪೋರೇಶನ್ ಹೆಸರಿನಲ್ಲಿ ನೀಡಿದ್ದರು ಎಂದು ತಿಳಿಸಿದ್ದು ದಿಃ 02-03-2013 ರಂದು ಬಳ್ಳಾರಿಯ ಮಂಜುನಾಥ ರವರು ನಮ್ಮ ಟ್ರಾನ್ಸ್ ಪೋರ್ಟ ಗೆ ಬಂದು ಇದೇ ವಿಚಾರ ಮಾತನಾಡಿದರು ಅಂದರೆ ಸರಿಯಲ್ಲ. ನಂತರ ಆರೋಪಿ ಚೆನ್ನೈಗೆ ಹೋಗುತ್ತಿರುವುದಾಗಿ ಸದರಿ ಹಣ ಜಾಮಾ ಅದ ನಂತರ ಅದಿರನ್ನು ಪೂರೈಸಲು ನನಗೆ ತಿಳಿಸಿದ ಅಂದರೆ ಸರಿಯಲ್ಲ . ಆರೋಪಿ ನನಗೆ ಪೋನ್ ಮಾಡಿ 51,00,000 ಜಮಾ ಅಗಿದೆ ಎದು ಹೇಳಿದ ಅಂದರೆ ಸರಿಯಲ್ಲ ನತರ ನಾನು ಐಡಿಬಿ ಐ ಬ್ಯಾಂಕಿನ ಕಲೆಕ್ಷನ್ ಗೆ ಹಾಕಿದಾಗ ಸದರಿ ಚೆಕ್ಕು ನಕಲೀ ಚೆಕ್ಕು ಎಂದು ವಾಪಸ್ಸು ಬಂದಿದ್ದರಿಂದ ಆರೋಪಿ ನನಗೆ ಮೋಸ ಮಾಡುವ ಉದ್ದೇಶದಿಂದ ಅ ಚೆಕ್ಕು ಕೊಟ್ಟಿದ್ದ ಎಂದು ನಾನು ಪೊಲೀಸ್‌ರಿಗೆ ಮೇಲೆ ಸೂಚಿಸಿದಂತೆ ಹೇಳಿಕೆ ಕೊಟ್ಟಿದ್ದೇನೆ ಅಂದರೆ ಸರಿಯಲ್ಲ ಸದರಿ ಹೇಳಿಕೆಯನ್ನು ನಿಪಿ 4 ಎಂದು ಗುರುತಿಸಲಾಯಿತು .

ನಿಪಿ 4 ರಲ್ಲಿರುವ ರಂತ ಹೇಳಿಕೆ ಕೊಟ್ಟಿದ್ದರೂ ಸಹ ಅರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ

ಪಾಟೀ ಸವಾಲು ಅರೋಪಿ ಪರ ವಕೀಲರಿಂದ

ಪಾಟೀ ಸವಾಲು ಇಲ್ಲಾ ಸವಾಲು ಎಂದು ತೆಗೆದುಕೊಳ್ಳಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಸಿ ಜೆ ಹೊಸಪೇಟೆ

ಪ್ರಧಾನ ಸಿವಿಲ್ ನ್ಯಾಯಧೀಶರು ಮತ್ತು ಪ್ರ .ದ ನ್ಯಾ ದಂ ಗಳ ನ್ಯಾಯಾಲಯ ಹೊಸಪೇಟೆ
ಸಿಸಿ 831-2014

ಸಿ ಡಬ್ಲೂ -3
ಪಿ ಡಬ್ಲೂ -3

ಸಾಕ್ಷಿ ಹೆಸರು - ಬಾಬಾ ಪಕುರುದ್ದೀನ್
ತಂದೆ / ಗಂಡನ ಹೆಸರು - ಅಲಾಂ ಬಾಷ
ವಯಸ್ಸು - 33 ವರ್ಷಗಳು
ಉದ್ಯೋಗ - ಖಾಸಗಿ ಕೆಲಸ
ವಾಸಸ್ಥಳ - ಹೊಸಪೇಟೆ

ಸಾಕ್ಷಿಯನ್ನು ದಿನಾಂಕ 05-04-2021 ರಂದು ಪ್ರಾಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆ- ಎ. ಪಿ. ಪಿ. ಅವರಿಂದ

ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಿ ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು ಆ ದಾಖಲೆಯನ್ನು ನಿಪಿ-3, ಎಂದು ಸಾಕ್ಷಿಯ ಸಹಿಯನ್ನು ನಿಪಿ 3 -ಬಿ ಎಂದು ಗುರುತಿಸಲಾಯಿತು . ಸದರಿ ಸಹಿಯನ್ನು ನಾನು ಸುಮಾರು 8-10 ವರ್ಷದ ಹಿಂದೆ ಕಂಪನಿಯಲ್ಲಿ ಕೆಲಸ ಮಾಡುವಾ ಗ ಸಹಿ ಮಾಡಿದ್ದೇನೆ .ನಿಪಿ 3 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ . ಈ ಪ್ರಕಣದ ಬಗ್ಗೆ ನಾನು ಹೇಳಿಕ ಕೊಟ್ಟಿಲ್ಲ

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದ

ದಿನಾಂಕ 30-03-2013 ರಂದು ಪೊಲೀಸ್ ರು ನನ್ನ ಹಾಗಾ ಚಾಸಾ 2 ರವರನ್ನು ಪಂಚರಾಗಿ ಬರಮಾಡಿಕೊಂಡು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ರೈಲ್ವೆ ಸ್ಟೇಷನ್ ರಸ್ತೆಯಲ್ಲಿರುವ ಎಸ್ ಬಿ ಐ ಬ್ಯಾಂಕಿನ ಮುಂದುಗಡೆ ಮದ್ಯಾಹ್ನ 1-00 ರಿಂದ 2-00 ರವರಗೆ ಚಾಸಾ 1 ರವರ ಸಮಕ್ಷಮ ಪಂಚಾನಮೆ ಮಾಡಿದಾರೆ ಅಂದರೆ ಸರಿಯಲ್ಲ.

ಪಾಟೀ ಸವಾಲು ಅರೋಪಿ ಪರ ವಕೀಲರಿಂದ

ಪಾಟೀ ಸವಾಲು ಇಲ್ಲಾ ಸವಾಲು ಎಂದು ತೆಗೆದುಕೊಳ್ಳಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಸಿ ಜೆ ಹೊಸಪೇಟೆ